ನಾರಾಯಣಪುರ ಜಲಾಶಯದ ಬಲದಂಡೆ ಕಾಲುವೆ ನಿರ್ಮಾಣ

3273 - ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣ ಮೇಲ್ದಂಡೆ ಯೋಜನೆಯ 2ನೇ ಹಂತದ ನಾರಾಯಣಪುರ ಜಲಾಶಯದ ಬಲದಂಡೆ ಕಾಲುವೆ ನಿರ್ಮಾಣ ಮಾಡಲು ಸರ್ಕಾರ ಅನುಮತಿ ನೀಡಿದೆಯೇ?*

ಆ) *ಅನುಮತಿ ನೀಡಿದ್ದರೆ ಯೋಜನೆಯ ಕಾಮಗಾರಿ ಕೈಗೊಳ್ಳಲಾಗಿದೆಯೇ? ಯೋಜನೆಯ ವಿವರ ನೀಡುವುದು? ಎಷ್ಟು ಎಕರೆ ಭೂಮಿಗೆ ಇದರಿಂದ ನೀರಾವರಿ ಸೌಲಭ್ಯ ಒದಗಿಸಲಾಗುವುದು?*

ಇ) *ಕಾಮಗಾರಿಯು ಈಗ ಯಾವ ಹಂತದಲ್ಲಿದೆ? ಯಾವಾಗ ಕಾಮಗಾರಿ ಪೂರ್ಣಗೊಳಿಸಲಾಗುವುದು?*

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಅನುಮತಿ ನೀಡಿದೆ.

ಆ) ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಯೋಜನೆಯ ವಿವರಗಳನ್ನು ಅನುಬಂಧ -1ರಲ್ಲಿ ನೀಡಲಾಗಿದೆ. ಈ ಯೋಜನೆಯಿಂದ 84000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುವುದು.

ಇ) ನಾರಾಯಣಪುರ ಬಲದಂಡೆ ಕಾಲುವೆಯ ಉದ್ದ 95 ಕಿ.ಮೀ. ಇದ್ದು, ಕಿ.ಮೀ. 0 ರಿಂದ 66ರ ವರೆಗಿನ ಕಾಮಗಾರಿಗಳು ಪೂರ್ಣಗೊಂಡಿದೆ. ಕಿ.ಮೀ. 66 ರಿಂದ 70ರ ವರೆಗಿನ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಕಿ.ಮೀ. 71 ರಿಂದ 85ರವರೆಗಿನ ಕಾಮಗಾರಿಗಳನ್ನು ಕಿಲೋ ಮೀಟರ್‌ವಾರು ಟೆಂಡರ್ ಆಧಾರದ ಮೇಲೆ ತೆಗೆದುಕೊಂಡಿದ್ದು, ಈ ರೀಚ್‌ನಲ್ಲಿ ಮಣ್ಣಿನ ಆಗೆತ ಮತ್ತು ಏರಿ ನಿರ್ಮಾಣದ ಕೆಲಸಗಳು ಪೂರ್ಣಗೊಂಡಿದ್ದು, ಇದರಲ್ಲಿ ಬರುವ ಕ್ರಾಸ್ ಡ್ರೈನೇಜ್ ಕೆಲಸಗಳು (ಸಿ.ಡಿ. ಕೆಲಸಗಳು) ಪ್ರಗತಿಯಲ್ಲಿದೆ. ಕಿ.ಮೀ. 85 ರಿಂದ 95ರವರೆಗಿನ ಕೆಲಸಗಳನ್ನು ಟೆಂಡರ್ ಆಧಾರದ ಮೇಲೆ ವಹಿಸಿದ್ದು, ಇವು ಪ್ರಗತಿಯಲ್ಲಿದೆ.

ನಾರಾಯಣಪುರ ಬಲದಂಡೆ ಕಾಲುವೆಯ ಎಲ್ಲಾ ಕಾಮಗಾರಿಗಳು 2002ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ನಾರಾಯಣಪುರ ಬಲದಂಡೆ ಕಾಲುವೆ ವಿವರಗಳು

1.	ಒಟ್ಟು ಉದ್ದ	95 ಕಿ.ಮೀ
2.	ನೀರಿನ ಹಿಡಿಯುವ ಪ್ರಮಾಣ (3500 ಕ್ಯೂಸೆಕ್ಸ್)	99.09 ಕ್ಯೂಸೆಕ್ಸ್

3.	ನೀರಾವರಿ ಆಗುವ ಒಟ್ಟು ಕ್ಷೇತ್ರ	84,000 ಹೆಕ್ಟೇರ್ (2,07564 ಎಕರೆ)
	ಅ) ಲಿಂಗಸಗೂರು ತಾ.	12000 ಹೆಕ್ಟೇರ್
	ಆ) ದೇವದುರ್ಗ ತಾ.	72000 ಹೆಕ್ಟೇರ್
4.	ಒಟ್ಟು ವಿತರಣಾ ಕಾಲುವೆಗಳು	18
5.	ನೀರಿನ ಒಟ್ಟು ಉಪಯೋಗದ ಪ್ರಮಾಣ	23.33 ಟಿ.ಎಂ.ಸಿ

ತೊದಲಬಾಗಿ ಏತ ನೀರಾವರಿ ಯೋಜನೆ ವಿಳಂಬ

3274 - ಶ್ರೀ ಪಿ.ಎಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ತೊದಲಬಾಗಿ ಏತ ನೀರಾವರಿ ಯೋಜನೆ ಪ್ರಾರಂಭಗೊಂಡಿದ್ದು ಯಾವಾಗ, ಯೋಜನೆಗೆ ಮೀಸಲಿಟ್ಟಿದ್ದ ಹಣ ಎಷ್ಟು? ವೆಚ್ಚ ಮಾಡಿರುವ ಹಣ ಎಷ್ಟು?*

2. *ಯೋಜನೆಯ ಕಾಮಗಾರಿಯನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

1. ತೊದಲಬಾಗಿ ಏತ ನೀರಾವರಿ ಯೋಜನೆಯು ಕೃಷ್ಣಾ ಏತ ನೀರಾವರಿ ನಿಗಮದಿಂದ 1992-93ರಲ್ಲಿ ಕೆಲಸ ಪ್ರಾರಂಭವಾಯಿತ್ತು. ಈ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 825 ಲಕ್ಷಗಳು. ಇದಕ್ಕೆ ಇದುವರೆಗೆ ವೆಚ್ಚ ಮಾಡಿರುವ ಹಣ ರೂ. 796.00 ಲಕ್ಷಗಳು.

2. ಯೋಜನೆಯ ವಿವಿಧ ಕಾಮಗಾರಿಗಳು ಈ ಕೆಳಗಿನಂತೆ ನೀಡಲಾಗಿದೆ.

1.	ಸಿವಿಲ್ ಕಾಮಗಾರಿಗಳು (ಜಾಕ್‌ವೆಲ್, ಇನಟೇಕಾವಲ್ ಇನ್‌ಟೇಕ್ ಚೇಂಬರ್ ಇತ್ಯಾದಿ	ಶ್ರೀ ಆನಂದ ಎಸ್.ಎಂ. 1ನೇ ದರ್ಜೆ ಗುತ್ತಿಗೆದಾರರು, ವಿಜಾಪುರ
2.	ರೈಸಿಂಗ್ ಮೇನ್	ಶ್ರೀ ಆನಂದ ಎಸ್.ಎಂ.
3.	ಕಾಲುವೆಗಳು	ಸಂಜೀವರೆಡ್ಡಿ, ಗುತ್ತಿಗೆದಾರರು
4.	ಮೆಶಿನರಿ ಪೂರೈಕೆ ಹಾಗೂ ಅಳವಡಿಕೆ	ಮೆ. ಅರುಣ ಇಂಜಿನಿಯರಿಂಗ್ ಎಂಟರ್‌ಪ್ರೈಸಸ್, ಬೆಂಗಳೂರು.
5.	ವಿದ್ಯುಚ್ಛಕ್ತಿ ಲಾಯಿಸ್ ಹಾಗೂ ಟ್ರಾನ್ಸ್‌ಫಾರ್ಮರ್ ಸಬ್ ಸ್ಟೇಷನ್	ಶ್ರೀ ಎ.ಎಸ್. ಜಾನಗೌಡ